**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>**

**ಸಿಸಿ ನಂ. 20544/2017 ಚಾಸಾಃ 8 ಪ್ರಾಸಾಃ 5**

| | | |
|---|---|---|
| ಸಾಕ್ಷಿದಾರರ ಹೆಸರು | : | ರೇಣುಕಾಂಬ |
| ಗಂಡನ ಹೆಸರು | : | ನಾಗರಾಜು |
| ವಯಸ್ಸು | : | 38 ವರ್ಷ |
| ವೃತ್ತಿ | : | ಖಾಸಗಿ ಕೆಲಸ |
| ವಾಸ | : | ದಾಸರಹಳ್ಳಿ, ಬೆಂಗಳೂರು |

**<u>ಸಾಕ್ಷಿಯನ್ನು ದಿಃ 01.10.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸಾ.ಸ.ಅ ರವರಿಂದಃ-</u>**

ಆರೋಪಿಗಳ ಪರಿಚಯ ಇರುತ್ತದೆ. ನಾನು 2008 ರಿಂದ ಕನಕಪುರ ರಸ್ತೆಯಲ್ಲಿರುವ ಬನಶಂಕರಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿಯಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದೇನೆ. 1ನೇ ಮತ್ತು 2ನೇ ಆರೋಪಿತರು ಸದರಿ ದೇವಸ್ಥಾನದಲ್ಲಿ ಅರ್ಚಕರಾಗಿ ಕೆಲಸ ಮಾಡುತ್ತಿದ್ದರು. 2015ರಲ್ಲಿ ಸದರಿ ದೇವಸ್ಥಾನದ ಕಿರೀಟ ಮತ್ತು ಪಾದುಕೆ ಭಿನ್ನವಾಗಿರುವುದು ನಮಗೆ ತಿಳಿಯಿತು. 2ನೇ ಆರೋಪಿ ನನ್ನ ಬಳಿ ಬಂದು ಒಂದು ಲೆಟರ್ ಅನ್ನು ಟೈಪ್ ಮಾಡಿಕೊಡಲು ಕೇಳಿದ್ದರು ಅದರಂತೆ ಟೈಪ್ ಮಾಡಿ ಕೊಟ್ಟಿರುತ್ತೇನೆ. ನಾನು ಏನು ಟೈಪ್ ಮಾಡಿರುತ್ತೇನೆ ಎಂದು ನೆನಪಿಲ್ಲ. ಅದೇ ದಿನ ಚಾಸಾ-1 ಮತ್ತು 7 ರವರ ಮಾಹಿತಿಯಂತೆ ಲೆಟರ್ ಗಳನ್ನು ಟೈಪ್ ಮಾಡಿ ಕೊಟ್ಟಿರುತ್ತೇನೆ. 2ನೇ ಆರೋಪಿ ಟೈಪ್ ಮಾಡಿಸಿದ್ದ ವಿಷಯವನ್ನು ನಾನು ನಂತರ ಡಿಲೇಟ್ ಮಾಡಿರುತ್ತೇನೆ.

ನಾನು 2ನೇ ಆರೋಪಿಯ ಸಂಬಂಧ ಮುಂದುವರೆದ ಹೇಳಿಕೆಯನ್ನು ಪೊಲೀಸರ ಮುಂದೆ ನೀಡಿರುವುದಿಲ್ಲ. 2ನೇ ಆರೋಪಿಯು ರಿಪೋರ್ಟರ್ ಎಂದು ನಂಬಿಸಿ ಜನರಿಗೆ ಮೋಸ ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಗಳ

ಹಿನ್ನಲೆಯ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಗಳ ನಡುವೆ ತಟ್ಟೆಕಾಸಿನ ವಿಚಾರದಲ್ಲಿ ಜಗಳ ಆಗುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಕಿರೀಟ ಮತ್ತು ಪಾದುಕೆಯಲ್ಲಿ ಚಿನ್ನವನ್ನು ಕದ್ದಿರುವುದು ತಿಳಿದು ಬಂದಿರುತ್ತದೆ ಅದರ ಪ್ರಮಾಣ ಎಷ್ಟು ಎಂದು ನನಗೆ ಹೇಳಲು ಆಗುವುದಿಲ್ಲ.

**ಸೂಚನೆಃ ಈ ಹಂತದಲ್ಲಿ ಪ್ರಾಜ್ಞಾ ಹಿ.ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಬೇಕೆಂದು ನ್ಯಾಯಾಲಯಕ್ಕೆ ಮನವಿಯನ್ನು ಕೋರಿರುತ್ತಾರೆ. ಅದರಂತೆ ಅನುಮತಿಯನ್ನು ನೀಡಲಾಯಿತು.**

**<u>ಪಾಟೀ ಸವಾಲುಃ ಪ್ರಾಜ್ಞಾ ಹಿ.ಸ.ಸ.ಅ. ರವರಿಂದಃ</u>**

2ನೇ ಆರೋಪಿಯು ಪತ್ರಕರ್ತನೆಂದು ನಂಬಿಸಿ ಜನರಿಗೆ ಮೋಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ19.12.2007 ರಂದು 2ನೇ ಆರೋಪಿ ದೇವರ ಬಾಗಿಲು ತೆಗೆದು ಅನದಿಕೃತವಾಗಿ ಪೂಜೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ16.01.2013 ರಂದು ಭಕ್ತಾದಿಗಳು ಜಾತ್ರೆಗೆಂದು ನೀಡಿದ ಹಣವನ್ನು ಆರೋಪಿಗಳು ಸ್ವಂತಕ್ಕೆ ಬಳಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳಿಬ್ಬರೂ ಸೇರಿ ಕಿರೀಟ ಮತ್ತು ಪಾದುಕೆಯ ಚಿನ್ನವನ್ನು ಕತ್ತರಿಸಿ ಕದ್ದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಿರೀಟದಲ್ಲಿ 5.150 ಗ್ರಾಂ ಮತ್ತು ಪಾದುಕೆಗಳಲ್ಲಿ 1.660 ಗ್ರಾಂ ಕಡಿಮೆ ಇದ್ದು ಒಟ್ಟು ವ್ಯತಾಸ 6.810 ಗ್ರಾಂ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗಳು ಸದರಿ ಪ್ರಮಾಣದ ಚಿನ್ನವನ್ನು ಕಳವು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಈ ಸಂಬಂಧ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಪೊಲೀಸರ ಮುಂದೆ ನೀಡಿದ್ದರು ಎಂಬ ಹೇಳಿಕೆಯನ್ನು ನಿಪಿ-25 ಎಂದು ಗುರ್ತಿಸಲಾಯಿತು. ನಿಪಿ-25 ರಂತೆ ನಾನು ಹೇಳಿಕೆ ನೀಡಿದ್ದರು ಈಗ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2ನೇ ಆರೋಪಿ ಪರ ಶ್ರೀ.ಕೆ.ಕೆ. ವಕೀಲರಿಂದಃ</u>**

ಈ ಘಟನೆ ನಡೆಯಿತು ಎಂಬ ದಿನಾಂಕ ಗೊತ್ತಿಲ್ಲ. 2ನೇ ಆರೋಪಿ ನನ್ನ ಬಳಿ ಯಾವುದೇ ಪತ್ರವನ್ನು ಟೈಪ್ ಮಾಡಿಸಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬರೆದಿದ್ದ ಪತ್ರದಲ್ಲಿ ಏನು ಬರೆದಿದ್ದರು ಎಂದು ನಾನು ನೋಡಿಲ್ಲ. ಕಿರೀಟ ಮತ್ತು ಪಾದುಕೆಯ ಚಿನ್ನವನ್ನು ಯಾರು ಕತ್ತರಿಸಿರುತ್ತಾರೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ನಾನು ಪೊಲೀಸರ ಮುಂದೆ ಈ ಪ್ರಕರಣ ಸಂಬಂಧ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ.

**<u>ಪಾಟೀ ಸವಾಲುಃ 1ನೇ ಆರೋಪಿ ಪರ ಕುಮಾರಿ ಜ್ಯೋತಿ ವಕೀಲರಿಂದಃ</u>**

1ನೇ ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯ ಬಗ್ಗೆ ನಾನು ಯಾವುದೇ ಹೇಳಿಕೆಯನ್ನು ಪೊಲೀಸರ ಮುಂದೆ ನೀಡಿಲ್ಲ.

ಉಳಿದಂತೆ ಮೇಲ್ಕಂಡ 2ನೇ ಆರೋಪಿ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅನುಮತಿ ನೀಡಲಾಗಿದೆ.

**<u>ಮರು ವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**